ಮಾಡಬೇಕೆಂದು ನಾವು ಹೇಳಿದ್ದೇವೆ. ಇದಕ್ಕೆ ತಾವು ಒಂದು ಕಾಲ ಮಿತಿಯನ್ನು ಏನಾದರೂ ಕೊಟ್ಟಿದ್ದೀರಾ ?

ಶ್ರೀ ಜೆ. ಹೆಚ್. ಪಟೇಲ್.—ಸಾಮಾನ್ಯವಾಗಿ ವಾಯು ಮಾಲಿನ್ಯ ನಿಯಂತ್ರಣ ಯಂತ್ರದ ಸಾವಧಾನಂಗಳು ನಮ್ಮದೇಶದಲ್ಲೇ ಸಿಕ್ಕುವುದಾದರೆ ಅದನ್ನು ತರಿಸಿ ಅಳವಡಿಸಲು ೩ ತಿಂಗಳ ಕಾಲ ಮಿತಿಯನ್ನು ಕೊಟ್ಟಿರುತ್ತೇವೆ. ಒಂದುವೇಳೆ ನಮ್ಮ ರಾಜ್ಯವನ್ನು ಬಿಟ್ಟು ಹೊರಗಿನಿಂದ ಆ ಸಾಮಾನುಗಳನ್ನು ತರಿಸಬೇಕಾದರೆ ಅದಕ್ಕೆ ತಕ್ಕಂತೆ ಕಾಲ ಮಿತಿಯನ್ನು ಕೊಟ್ಟಿರುತ್ತೇವೆ. ಒಟ್ಟಿನಲ್ಲಿ ಕಾಲಮಿತಿಯನ್ನಂತೂ ಹಾಕಿರುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಜಲ ಮಾಲಿನ್ಯದ ಬಗ್ಗೆ ಯಾರು ಕಾರಣವಾಗಿರುತ್ತಾರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಇಂಡಸ್ಟ್ರಿಗಳನ್ನು ತೆರೆಯಲು ನೀವು ಮಾಡಿರತಕ್ಕ ರೂಲ್ಸ್ ಏನಿದೆ ಅದರಲ್ಲಿ ಬಹಳಷ್ಟು ನಮಗೇ ವಿರುದ್ಧವಾಗಿವೆ. ನಾವು ಅವರಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ ಅವರು ಕೂಡಲೇ ಕೋರ್ಟಿಗೆ ಹೋಗುತ್ತಾರೆ. ಇದಕ್ಕೆ ಬದಲಾಗಿ ಇಂಡಸ್ಟ್ರೀಸ್‌ನವರಿಗೆ ಲೈಸೆನ್ಸ್ ಕೊಡುವುದನ್ನೇ ಬಿಟ್ಟರೆ ಸುಮ್ಮನಿರುತ್ತಾರೆ. ಮೂಗು ಹಿಡಿದರೆ ಬಾಯನ್ನು ತಾನೇತಾನಾಗಿ ಬಿಡುತ್ತಾರೆ ಅನ್ನುವಂತೆ ರೂಲ್ಸ್‌ನಲ್ಲಿ ನೀವು ಬಿಗಿಯಾಗಿದ್ದರೆ ನೀವು ಹೇಳಿದಂತೆ ಅವರು ಕೇಳುತ್ತಾರೆ. ಇಲ್ಲದಿದ್ದರೆ ನೀವು ಲೈಸೆನ್ಸ್ ಕೊಟ್ಟಮೇಲೆ ಮತ್ತೆ ಅವರನ್ನು ನಿಲ್ಲಿಸುವುದಕ್ಕೆ ಬಹಳ ಕಷ್ಟ. ರೂಲ್ಸ್‌ನ್ನು ತಿದ್ದುಪಡಿ ತರುವುದರ ಮೂಲಕ ಬಿಗಿ ಮಾಡಿ ಎಂದೂ ನಾನು ಅನೇಕಸಾರಿ ಹೇಳಿದ್ದೇವೆ. ಆದರೆ ತಾವು ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಅನೇಕಸಾರಿ ಹೇಳಿದ್ದೇನೆ ಎಂದು ಅವರು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಇದು ಮೊದಲನೇಸಾರಿ ಅವರು ಇಲ್ಲಿ ಹೇಳುತ್ತಿರುವುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ೨–೩ ಕಾಗದಗಳನ್ನು ನಿಮಗೆ ಬರೆದಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕಿಯವರು ಯಾವ ಫ್ಯಾಕ್ಟರಿಯನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಕಾರವಾರದಲ್ಲಿರತಕ್ಕ ಕಂಪೆನಿಗೆ ನಾವು ಪೋಲಿಸ್ ಕಾವಲನ್ನು ಹಾಕಿ ಅದನ್ನು ಬಂದ್ ಮಾಡಿಸಿದ್ದೇವೆ ಅದಕ್ಕೆ ಬೇಕಾದ ಎಕ್ವಿಪ್‌ಮೆಂಟ್‌ನ್ನು ತಂದಮೇಲೆ ಅದನ್ನು ಅಳವಡಿಸಿ ನಂತರ ಕಾರ್ಖಾನೆಯನ್ನು ಚಾಲೂ ಮಾಡಬೇಕೆಂದು ತಿಳಿಸಿದ್ದೇವೆ. ವಾಯು ಮಾಲಿನ್ಯ ಅಥವಾ ಜಲ ಮಾಲಿನ್ಯ ಮಾಡತಕ್ಕ ಯಾವುದೇ ಕಾರ್ಖಾನೆಗಳಾಗಲಿ ಮಾನ್ಯ ಸದಸ್ಯರ ಗಮನಕ್ಕೆ ಬಂದಕೂಡಲೇ ಅದನ್ನು ನನ್ನ ಗಮನಕ್ಕೆ ತಂದರೆ ಕೂಡಲೇ ಅದರ ವಿರುದ್ಧ ತೀವ್ರ ಕ್ರಮತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಉಚ್ಚಂಗಿದುರ್ಗ ಗ್ರಾಮಕ್ಕೆ ಪಶು ಚಿಕಿತ್ಸಾಲಯ

೮೬೭(ಡಿ) ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ರೇಷ್ಮೆ, ವ್ಯವಸಾಯ, ಪಶುಸಂಗೋಪನಾ ಹಾಗೂ ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ಗ್ರಾಮವು ದೊಡ್ಡ ಗ್ರಾಮವಾಗಿದ್ದು ಸುತ್ತಮುತ್ತಲಿನ ೨೦–೨೫ ಹಳ್ಳಿಗಳಿಗೆ ಕೇಂದ್ರವಾಗಿರುವುದು ನಿಜವಲ್ಲವೆ.

ಆ) ಈ ಭಾಗದ ರೈತರಿಗೆ, ದನಕರುಗಳಿಗೆ ಚಿಕಿತ್ಸೆಗೆ ಯಾವುದೇ ಸರಕಾರಿ ಪಶು ಚಿಕಿತ್ಸಾಲಯ ಇಲ್ಲದಿರುವುದು ನಿಜವಲ್ಲವೆ.

ಇ) ಚಿಕಿತ್ಸೆಗಾಗಿ ಗ್ರಾಮಸ್ಥರು ೧೮–೨೦ ಕಿ.ಮೀ. ದೂರ ಕ್ರಮಿಸಬೇಕಾಗಿರುವುದು ನಿಜವಲ್ಲವೆ, ಅಸಂನೀಗಿದ್ದು ಸರಿಯೇ ಹಾಗೂ ಈ ಜಾಗಕ್ಕೆ ಅತ್ಯಂತ ಅವಶ್ಯವಿರುವ ಪಶು ಚಿಕಿತ್ಸಾಲಯವನ್ನು ಜರೂರು ಮಂಜೂರು ಮಾಡಲಾಗುವುದೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ನಿಜ.

ಆ) ನಿಜ.

ಇ) ಉಚ್ಚಂಗಿದುರ್ಗ ಗ್ರಾಮಕ್ಕೆ ೧೧ ಕಿ.ಮೀ. ದೂರದ ಕಮ್ಮತಹಳ್ಳಿ ಗ್ರಾಮದಲ್ಲಿ ಒಂದು ಗ್ರಾಮೀಣ ಪಶು ಚಿಕಿತ್ಸಾಲಯವಿರುತ್ತದೆ. ಉಚ್ಚಂಗಿದುರ್ಗ ಗ್ರಾಮದಲ್ಲಿ ಚಿಕಿತ್ಸೆ ದೊರೆಯದೆ ಜಾನುವಾರುಗಳು ಅಸುನೀಗಿದ ಬಗ್ಗೆ ಯಾವುದೇ ವರದಿ ದೂರುಗಳು ಬಂದಿರುವುದಿಲ್ಲ. ಉಚ್ಚಂಗಿದುರ್ಗ ಗ್ರಾಮಕ್ಕೆ ಗ್ರಾಮೀಣ ಪಶುಚಿಕಿತ್ಸಾಲಯವನ್ನು ಮಂಜೂರು ಮಾಡುವ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೇ ಹಿಂದೆ ೧೯೬೭–೬೮ನೇ ಸಾಲಿನಲ್ಲಿ ಉಚ್ಚಂಗಿದುರ್ಗದಲ್ಲಿ ಒಂದು ಪಶುವೈದ್ಯ ಚಿಕಿತ್ಸಾಲಯವನ್ನು ಸ್ಥಾಪನೆ ಮಾಡುವ ಸಲುವಾಗಿ ಮೆಟೀರಿಯಲ್ಸ್ ಒದಗಿಸಿದ್ದು ಈವತ್ತಿಗೂ ಇದೆ. ಒಂದು ಮನೆಯಲ್ಲಿ ಇಟ್ಟು ಬೀಗ ಹಾಕಿರುತ್ತಾರೆ. ಆಸ್ಪತ್ರೆಯನ್ನು ಸ್ಥಾಪಿಸಲು ಮಂಜೂರಾತಿಯನ್ನು ಕೊಟ್ಟಿದ್ದಾರೆ. ಅಲ್ಲಿಯು ಸುತ್ತಮುತ್ತಲ ಜಾನುವಾರುಗಳು ದಾವಣಗೆರೆಗೆ ಹೋಗಬೇಕಾಗಿದೆ. ಉಚ್ಚಂಗಿದುರ್ಗದಲ್ಲಿರತಕ್ಕಂಥ ಆಸ್ಪತ್ರೆಯನ್ನು ಇನ್ನೂ ಕೂಡ ಅಪಗ್ರೇಡ್ ಮಾಡಿಲ್ಲ. ಒಬ್ಬ ಇನ್‌ಸ್ಪೆಕ್ಟರ್ ಮಾತ್ರ ಇರುತ್ತಾರೆ. ಡಾಕ್ಟರುಗಳು ಇರುವುದಿಲ್ಲ. ಸರಿಯಾದ ಔಷಧಿಗಳು ಇರುವುದಿಲ್ಲ. ಸುತ್ತಮುತ್ತಲಿನ ಹಳ್ಳಿಯವರು ದಾವಣಗೆರೆಗೆ ಹೋಗುವ ಪರಿಸ್ಥಿತಿ ಇರುತ್ತದೆ. ಸುತ್ತಮುತ್ತಲಿನ ಗ್ರಾಮಗಳಿಗೆ ಉಚ್ಚಂಗಿ ದುರ್ಗ ಸೆಂಟರ್ ಆಗಿರುತ್ತದೆ ರಾಮಗಟ್ಟಿತಾಂಡ, ಬೂದಿಹಾಳ್, ಬೇವನಹಳ್ಳಿ ತಾಂಡ ಅಂಚೆಕೇರಿ ಇವೇ ಮುಂತಾದ ಹಳ್ಳಿಗಳಿಗೆ ಸೆಂಟರ್ ಆಗಿರುತ್ತದೆ. ಆದ್ದರಿಂದ ಇಲ್ಲಿಗೆ ಆಸ್ಪತ್ರೆಯನ್ನು ಕೊಡುವ ಬಗ್ಗೆ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೇ ಪಶುವೈದ್ಯಶಾಲೆ ಮಂಜೂರಾತಿ ಮಾಡುವ ಕಾಲದಲ್ಲಿ ಮಾನ್ಯ ಸದಸ್ಯರು ಏನು ಸೂಚನೆಯನ್ನು ಕೊಟ್ಟಿರುತ್ತಾರೆಯೋ ಅದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇನೆಂದು ಹೇಳುತ್ತೇನೆ.

ಅರಣ್ಯದಿಂದ ಬರುವ ವಾರ್ಷಿಕ ವರಮಾನ

೧೯೫೩. ಶ್ರೀ ಜಿ. ಎಸ್. ಹೆಗಡೆ ಆಜ್ಜೀಬಾಳ ಹೆಗ್ಡೆ (ಅಂಕೋಲ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಉತ್ತರ ಕನ್ನಡ ಜಿಲ್ಲೆಯ ಅರಣ್ಯದಿಂದ ಬರುತ್ತಿರುವ ವಾರ್ಷಿಕ ವರಮಾನ ಎಷ್ಟು? ಹಾಗೂ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗೆ ಇದರಿಂದ ಎಷ್ಟು ಅನುದಾನ ನೀಡಲಾಗುತ್ತಿದೆ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು) –

ಅ) ಉತ್ತರ ಕನ್ನಡ ಜಿಲ್ಲೆಯ ಅರಣ್ಯಗಳಿಂದ ಬರುವ ವಾರ್ಷಿಕ ವರಮಾನ ಸುಮಾರು ೨೦ರಿಂದ ೨೧ ಕೋಟಿ ರೂಪಾಯಿಗಳು. ಈ ಜಿಲ್ಲೆಯ ಅರಣ್ಯ ಅಭಿವೃದ್ಧಿ ಕಾಮಗಾರಿಗೆ ನೀಡಲಾದ ಅನುದಾನ ೧೯೮೫–೮೬ ಮತ್ತು ೧೯೮೬–೮೭ಕ್ಕೆ ಈ ಕೆಳಗಿನಂತಿದೆ.

ವರ್ಷ	ಯೋಜನೆ (ರೂ. ಕೋಟಿ)	ಯೋಜನೇತರ (ರೂ. ಕೋಟಿ)	ಮೊತ್ತ (ರೂ. ಕೋಟಿ)
೧೯೮೫–೮೬	೧.೮೦	೫.೧೭	೬.೯೭
೧೯೮೬–೮೭	೧.೪೦	೭.೦೯	೮.೪೯

ಸರ್ಕಾರವು ಜಿಲ್ಲೆಯ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬೇಕಾಗುವ ಹಣವನ್ನು ಆ ಜಿಲ್ಲೆಯ ಬೇಡಿಕೆ ಮತ್ತು ಅವಶ್ಯಕತೆಗಳನ್ನು ಮನಗಂಡು ರಾಜ್ಯದ ಕನ್‌ಸಾಲಿಡೇಟೆಡ್ ಫಂಡ್‌ನಿಂದ ಒದಗಿಸುತ್ತದೆ. ಯಾವುದೇ ಒಂದು ಇಲಾಖೆಯ ಆದಾಯದಿಂದ ಅದನ್ನು ನೀಡಲಾಗುವುದಿಲ್ಲ.

ಶ್ರೀ ಜಿ. ಎಸ್. ಹೆಗಡೆ ಆಜ್ಜೀಬಾಳ.—ಉತ್ತರ ಕನ್ನಡ ಜಿಲ್ಲೆಯು ಅರಣ್ಯಗಳಿಂದ ಲ್ಯಾಂಡ್ ರೆವಿನ್ಯೂ ಕಡಿಮೆಯಾಗಿರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಹಣ ಸಿಕ್ಕುತ್ತಿದೆಯೇ ಹೇಗೆ ಎಂದು ಕೇಳುತ್ತೇನೆ.